# ಶರಣಾಗತಿ

ಸ್ವಾಮಿ ಶಾಂತಿವ್ರತಾನಂದ

ಭಕ್ತಿಮಾರ್ಗದಲ್ಲಿ ಸಾಧಕನು ಅನುಸರಿಸುವ ಒಂದು ವಿಶಿಷ್ಟ ಮನೋಭಾವವೇ ಶರಣಾಗತಿ. ವಿಧಿಪೂರ್ವಕ ಕ್ರಿಯೆಗಳಿಗಿಂತ ವ್ಯತಿರಿಕ್ತವಾಗಿ, ಪರಾಭಕ್ತಿಯ ಸಮೀಪಕ್ಕೆ ನಮ್ಮನ್ನು ಕರೆದೊಯ್ಯುವ ಶರಣಾಗತಿಯ ವಿಷಯವಾಗಿ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ಭಗವಾನ್ ಶ್ರೀರಾಮಕೃಷ್ಣರ ಜೀವಿತಾವಧಿಯ ಸಮಯದಲ್ಲಿ ಅನೇಕ ಗೃಹೀಭಕ್ತರು ಮತ್ತು ಸಂನ್ಯಾಸೀ ಶಿಷ್ಯರು ಅಹೇತುಕ ಕೃಪೆಗೆ ಪಾತ್ರರಾಗಿರುವುದನ್ನು ನಾವು ಕಾಣುತ್ತೇವೆ. ನಾವೂ ಕೂಡ ಅದೇ ಸಮಯದಲ್ಲಿ ಹುಟ್ಟಿ ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾಗಿದ್ದರೆ, ನಾವು ಧನ್ಯರಾಗುತ್ತಿದ್ದೆವು, ಸುಲಭವಾಗಿ ಮುಕ್ತಿಯನ್ನು ಪಡೆಯುತ್ತಿದ್ದೆವು ಎಂದು ನಮ್ಮಲ್ಲಿ ಹಲವರ ನಂಬಿಕೆ, ಅಭಿಪ್ರಾಯ. ಭಗವಂತನಲ್ಲಿ ಶರಣಾಗತನಾಗಿಬಿಟ್ಟರೆ ಸಾಕು, ಎಲ್ಲವೂ ಸುಲಭಸಾಧ್ಯ ಎಂದು ನಮ್ಮ ಆಲೋಚನೆ.

'ಶರಣಾಗತರಾದರೆ ಆಕಾಶವೂ ಬಾಗುತ್ತದೆ
ಅಹಂಕಾರ ತೊರೆದರೆ,ಜೀವನ ಶಾಂತ ಸಮುದ್ರದಂತಾಗುತ್ತದೆ
ಆತ್ಮಾರ್ಪಣೆ ಮಾಡಿದರೆ, ಮನಸ್ಸು ಶ್ರೀಮಂತವಾಗುತ್ತದೆ
ನಾನು ನೀಗಿದರೆ, ಎಲ್ಲೆಲ್ಲೂ ದೇವರ ಕಾಣುವಂತಾಗುತ್ತದೆ'

ಎಂಬ ಪದ್ಯದ ಸಾಲುಗಳನ್ನೇನೋ ಬರೆಯಬಹುದು. ಆದರೆ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಕಷ್ಟಸಾಧ್ಯ. ಅದೊಂದು ಭಗೀರಥ ಪ್ರಯತ್ನವೇ ಸರಿ. ಓದುಗರಿಗೆ ಈ ಮಾತುಗಳು ಅತಿಶಯೋಕ್ತಿ ಎನಿಸಬಹುದು. ಆದರೆ ಅದು ವಾಸ್ತವ. ಗಿರೀಶಚಂದ್ರ ಘೋಷರು ಭಗವಾನ್ ಶ್ರೀರಾಮಕೃಷ್ಣರಿಗೆ, ತಮ್ಮ ಸಂಪೂರ್ಣ ಜವಾಬ್ದಾರಿಯನ್ನು ಸಂತೋಷದಿಂದ ಒಪ್ಪಿಸಿಬಿಟ್ಟರು. ಆದರೆ ಆ ಶರಣಾಗತಿಯ ಅವಸ್ಥೆ ಬಹಳ ಕಠಿಣ ಎಂದು ತಮ್ಮ ಅನುಭವದಿಂದ ಹೇಳಿದ್ದಾರೆ. ಸ್ವಾಮಿ ವಿವೇಕಾನಂದರು 'ಓಂ ಹ್ರೀಂ ಋತಂ' ಸ್ತೋತ್ರದ ಪ್ರತಿ ಪದ್ಯದ ಕೊನೆಯಲ್ಲಿ 'ತಸ್ಮಾತ್ ತ್ವಮೇವ ಶರಣಂ ಮಮ ದೀನಬಂಧೋ' ಎಂದು ಹೇಳಿರುವುದು ನಮಗೆಲ್ಲ ತಿಳಿದ ವಿಷಯವೇ ಸರಿ.

ಶರಣಾಗತಿಯ ಕುರಿತು ಶ್ರೀಧರದೇವ ಗೋಸ್ವಾಮಿಯವರು ವೈಷ್ಣವ ಸ್ತೋತ್ರದಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಶರಣಾಗತಿಯ ಅಂಗಗಳನ್ನು ಅವರು ತಿಳಿಸಿದ್ದಾರೆ: *(ಲಕ್ಷ್ಮೀ ತಂತ್ರ ೧೭.೬೦)*

**ಆನುಕೂಲಸ್ಯ ಸಂಕಲ್ಪಃ ಪ್ರಾತಿಕೂಲ್ಯ ವಿವರ್ಜನಂ
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ
ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ॥**

ಭಕ್ತಿಗೆ ಅನುಕೂಲವಾಗುವುದನ್ನು ಸ್ವೀಕರಿಸುವುದು; ಭಗವಂತನನ್ನು ಪಡೆಯಲು ಅನನುಕೂಲ ಅಥವಾ ಪ್ರತಿಕೂಲ ಉಂಟಾಗುವ ವಿಷಯಗಳನ್ನು ತ್ಯಜಿಸುವುದು; ಭಗವಂತನು ಸರ್ವದಾ ನಮ್ಮನ್ನು ರಕ್ಷಿಸುತ್ತಾನೆ ಎಂಬ ಅಚಲವಾದ ನಂಬಿಕೆ, ಭಗವಂತನೇ ನನ್ನ ನಿಜವಾದ ಏಕೈಕ ಪ್ರಭು, ರಕ್ಷಕ ಎಂದು ಸಂಪೂರ್ಣವಾದ ಸಮರ್ಪಣೆ, ಹಾಗೂ ತನ್ನ ಇತಿ–ಮಿತಿಗಳನ್ನು, ದೋಷಗಳನ್ನು ಸಂಪೂರ್ಣವಾಗಿ ಸ್ವೀಕರಿಸುವುದು. ಈ ಆರು ಶರಣಾಗತಿಯ ಅಂಗಗಳು. ನಮ್ಮ ಶರಣಾಗತಿ, ಈ ಆರೂ ಅಂಶಗಳನ್ನು ಒಳಗೊಂಡಾಗ, ಅದು ನಿಜವಾದ ಶರಣಾಗತಿ ಎಂದು ಸಂತರ ಅಭಿಪ್ರಾಯ.

ನಾವು ಭಗವಂತನಲ್ಲಿ ಶರಣಾಗಿದ್ದೇವೆ, ಎಲ್ಲವೂ ಭಗವಂತನ ಇಚ್ಛೆ ಎಂದೆಲ್ಲಾ ಹೇಳುತ್ತಿರುತ್ತೇವೆ. ಅನೇಕ ಬಾರಿ, ಅದು ಬಾಯಿಮಾತು ಅಷ್ಟೇ. ಈಗ ಒಂದೊಂದು ಅಂಗಗಳನ್ನೂ ನೋಡೋಣ.

### ೧) ಆನುಕೂಲಸ್ಯ ಸಂಕಲ್ಪಃ

ಭಕ್ತಿಗೆ ಅನುಕೂಲವಾಗುವುದನ್ನು ಸ್ವೀಕರಿಸುವ ಸಂಕಲ್ಪ. ದಿವ್ಯತ್ರಯರ ಸಂದೇಶ, ಸಂತರ ಉಪದೇಶ, ಶಾಸ್ತ್ರವಾಕ್ಯಗಳನ್ನು ನಾವು ಓದಿರುತ್ತೇವೆ, ಕೇಳಿರುತ್ತೇವೆ. ಏನು ಮಾಡಬೇಕು, ಏನು ಮಾಡಬಾರದು ಎಂದು ನಮಗೆಲ್ಲ ತಿಳಿದಿದೆ. ಆದರೆ ಮಾಡಬೇಕಾಗಿರುವುದನ್ನು ಸರಿಯಾಗಿ ಮಾಡುತ್ತಿಲ್ಲ; ಬಿಡಬೇಕಾದುದನ್ನು ಬಿಡುತ್ತಿಲ್ಲ. ಆದ್ದರಿಂದ ಆಧ್ಯಾತ್ಮಿಕ ಪ್ರಗತಿ ನಮ್ಮಲ್ಲಿ ಇಚ್ಛಿಸಿದ ರೀತಿಯಲ್ಲಿ ಉಂಟಾಗುತ್ತಿಲ್ಲ.

'ಶ್ರೀ ಪ್ರಪನ್ನ ಜೀವನಾಮೃತಂ' (೩.೧) ಗ್ರಂಥವು ಈ ವಿಷಯವನ್ನು ಇನ್ನೂ ವಿವರವಾಗಿ ತಿಳಿಸುತ್ತದೆ.

**ಕೃಷ್ಣ ಕಾರ್ಷ್ಣಗ ಸದ್ಭಕ್ತಿಪ್ರಪನ್ನತ್ವಾನುಕೂಲಕೇ ।
ಕೃತ್ಯತ್ವನಿಶ್ಚಯಶ್ಚಾನುಕೂಲ್ಯಸಂಕಲ್ಪ ಉಚ್ಯತೇ ॥**

ಶ್ರೀಕೃಷ್ಣನ ಸೇವೆಗೆ, ಆತನ ಭಕ್ತರಿಗೆ ಮತ್ತು ಶರಣಾಗತರಿಗೆ ಅನುಕೂಲವಾಗಿರುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ದೃಢ ನಿಶ್ಚಯವನ್ನು 'ಆನುಕೂಲಸ್ಯ ಸಂಕಲ್ಪಃ' ಎಂದು ಕರೆಯುತ್ತಾರೆ.

ಗುರುಗಳೊಬ್ಬರು ತಮ್ಮ ಶಿಷ್ಯನಿಗೆ ಪ್ರತಿನಿತ್ಯ ನಿರ್ದಿಷ್ಟ ಜಪ ಮಾಡಲು ಉಪದೇಶಿಸಿದ್ದರು. ಅವನು ಅದರಂತೆ ಪ್ರಾಮಾಣಿಕವಾಗಿ ಸಾಧನೆ ಮಾಡಿದ. ಕಾಲಕ್ರಮೇಣದಲ್ಲಿ ಅವನಿಗೆ ಭಗವಂತನ ದರ್ಶನ ಪ್ರಾಪ್ತವಾಯಿತು. ನಿಷ್ಠೆ ಬಹಳ ಮುಖ್ಯ. ನಮಗೆಲ್ಲಾ ಭಕ್ತ ಪ್ರಹ್ಲಾದನ ಜೀವನ ಚರಿತ್ರೆ ತಿಳಿದೇ ಇದೆ. ಅವನ ತಂದೆ ಹಿರಣ್ಯಕಶಿಪು ಎಷ್ಟೇ ತೊಂದರೆ ಕೊಟ್ಟರೂ, ಅವನು ವಿಚಲಿತನಾಗಲಿಲ್ಲ. ಅಲ್ಲದೇ ಹರಿಭಕ್ತಿಗೆ ಅನುಕೂಲವಾಗುವ ಜಪ,

ಕೀರ್ತನೆ, ಇತ್ಯಾದಿಗಳನ್ನು ಮುಂದುವರೆಸಿದ. ಭಗವಂತನ ರಕ್ಷಣೆಗೆ, ದರ್ಶನಕ್ಕೆ ಪಾತ್ರನಾದ.

ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ತಂದೆ ಕ್ಷುದಿರಾಮರ ಜೀವನವೂ ಇದಕ್ಕೆ ಒಂದು ಉತ್ತಮ ನಿದರ್ಶನ. ಅವರು ಭಗವದ್ಭಕ್ತಿಗೆ ಅನುಕೂಲವಾಗುವ ಸತ್ಯಸಂಧತೆ, ಸರಳ ಜೀವನ, ಉಪಾಸನೆಗಳನ್ನು ಚಾಚೂ ತಪ್ಪದೆ ಮಾಡಿದರು. ಸತ್ಯವಾಕ್ಯ ಪರಿಪಾಲನೆಯಿಂದ ಸಕಲ ಆಸ್ತಿಯನ್ನೂ ಕಳೆದುಕೊಳ್ಳಬೇಕಾಯಿತು. ಆದರೆ ಅವರು ಋಜುತ್ವದಿಂದ ವಿಚಲಿತರಾಗಲಿಲ್ಲ.

### ೨) ಪ್ರತಿಕೂಲಸ್ಯ ವಿವರ್ಜನಂ

ಭಗವದ್ಭಕ್ತಿಗೆ ಮಾರಕವಾಗುವ ಎಲ್ಲಾ ವಿಷಯಗಳನ್ನು ಸಂಪೂರ್ಣವಾಗಿ ತ್ಯಜಿಸುವುದು.

**ಭಗವದ್ ಭಕ್ತಿಯೋಃ ಭಕ್ತಿಃ ಪ್ರಪತ್ತೇಃ ಪ್ರತಿಕೂಲದೇ ।**
**ವರ್ಜ್ಯತೇ ನಿಶ್ಚಯಃ ಪ್ರಾತಿಕೂಲ್ಯ ವರ್ಜನಂ ಉಚ್ಯತೇ ॥**

*(ಶ್ರೀ ಪ್ರಪನ್ನ ಜೀವನಾಮೃತ)*

ಭಗವಂತನ ಸೇವೆಗೆ, ಆತನ ಭಕ್ತರಿಗೆ ಮತ್ತು ಶರಣಾಗತಿಗೆ ವಿರೋಧಿಯಾದ ಎಲ್ಲವನ್ನೂ ತ್ಯಜಿಸುವ ದೃಢನಿಶ್ಚಯವೇ 'ಪ್ರತಿಕೂಲ್ಯ ವಿವರ್ಜನಂ' ಎಂದು ಹೇಳಲಾಗುತ್ತದೆ.

ಆಧ್ಯಾತ್ಮಿಕ ಪಿಪಾಸು ಚಿತ್ರವನ್ನು ಬಿಡಿಸುತ್ತಿದ್ದ. ಅದರಲ್ಲಿ ಅವನಿಗೆ ಬಹಳ ಆಸಕ್ತಿಯಿತ್ತು. ಅವನು ಆಶ್ರಮಕ್ಕೆ ಸಾಧು ಆಗಬೇಕೆಂದು ಸೇರಿದ. ಆದರೆ ಗುರುಗಳು, ''ಚಿತ್ರ ಬಿಡಿಸುವುದನ್ನು ಇನ್ನುಮುಂದೆ ಮಾಡದಿರು. ಅದು ನಿನ್ನ ಆಧ್ಯಾತ್ಮಿಕ ಜೀವನಕ್ಕೆ ಬಾಧಕವಾಗುತ್ತದೆ'' ಎಂದು ಆದೇಶಿಸಿದ್ದರು. ಆದರೆ ಅವನು ಚಿತ್ರ ಬಿಡಿಸುವ ಹವ್ಯಾಸವನ್ನು ಬಿಡಲಿಲ್ಲ. ಕಾರಣಾಂತರಗಳಿಂದ, ಆ ಹವ್ಯಾಸದಿಂದಲೇ ಅವನಿಗೆ ತೊಂದರೆ ಉಂಟಾಗಿ, ಆಶ್ರಮ ಬಿಡಬೇಕಾಯಿತು. ಹೀಗೆ ಗುರುಗಳ ಮಾತನ್ನು ನಾವು ಅಕ್ಷರಶಃ ಪಾಲಿಸಬೇಕು. ಚಿತ್ರಕಲೆ ತಪ್ಪಲ್ಲ. ಆದರೆ ಆ ಪಿಪಾಸುವಿಗೆ ಅದರಿಂದ ಬಾಧಕ ಉಂಟಾಗುತ್ತದೆ ಎಂದು ಗುರುಗಳು ತಿಳಿಸಿದ್ದರು.

ಕಾಮ, ಕ್ರೋಧ, ಲೋಭ ಇತ್ಯಾದಿ ಅರಿಷಡ್ವರ್ಗಗಳು, ಸೋಮಾರಿತನ ಮುಂತಾದ ಅನೇಕ ಗುಣಗಳು ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಬಾಧಿಸುತ್ತವೆ. ಅದು ತಿಳಿದಿದ್ದರೂ, ಅದನ್ನು ತ್ಯಜಿಸುತ್ತಿಲ್ಲ, ಬಿಡಲಾಗುತ್ತಿಲ್ಲ. ಆದ್ದರಿಂದ ನಮ್ಮ ಪ್ರಗತಿಯೂ ಕುಂಠಿತವಾಗುತ್ತದೆ. ಆದರೆ ಉತ್ತಮ ಸಾಧಕರು ಮಾಡಬೇಕಾದುದನ್ನು ಮಾಡುತ್ತಾರೆ; ಬಿಡಬೇಕಾದುದನ್ನು ಬಿಡುತ್ತಾರೆ. ಸೋಮಾರಿತನ, ಆಲಸ್ಯ ನಮಗೆ ಶತ್ರು ಎಂದು ನಮಗೆಲ್ಲಾ ತಿಳಿದ ವಿಷಯವೇ ಸರಿ. '**ಪ್ರಮಾದೋ ವೈ ಮೃತ್ಯುಃ**' - ಪ್ರಮಾದವು ಮೃತ್ಯುವನ್ನು ತಂದುಕೊಡುತ್ತದೆ ಎಂದು ಶಾಸ್ತ್ರ ಹೇಳಿದೆ. ಆದರೂ ನಾವು ಅದಕ್ಕೆ ಬಲಿಯಾಗುತ್ತಲೇ ಇದ್ದೇವೆ.

ಲಾಟು ಮಹಾರಾಜ್(ಸ್ವಾಮಿ ಅದ್ಭುತಾನಂದರು) ಒಂದು ಸಂಜೆ ಮಲಗಿದ್ದರು. ಏನು ಮಹಾ ವಿಷಯವೇನಲ್ಲ ಎಂದು ನಮ್ಮ ಅಭಿಪ್ರಾಯ. ಆದರೆ ಇದನ್ನು ತಿಳಿದ ಶ್ರೀರಾಮಕೃಷ್ಣರು ಲಾಟುವಿಗೆ, ''ನೀನು ಇಲ್ಲಿ ಭಗವಂತನ ದರ್ಶನಕ್ಕೆಂದು ಬಂದಿರುವೆ. ಹೀಗೆ ಮಲಗಿಕೊಂಡರೆ, ಇನ್ನು ಯಾವಾಗ ಸಾಧನೆ ಮಾಡುವೆ? ಯಾವಾಗ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವೆ?'' ಎಂದರು. ಈ ಮಾತುಗಳನ್ನು ಲಾಟು ಮಹಾರಾಜ್ ಗಂಭೀರವಾಗಿ ಪರಿಗಣಿಸಿದರು. ಇನ್ನು ಮುಂದೆ ಯಾವ ಕಾರಣಕ್ಕೂ ತಾನು ಆ ಸಮಯದಲ್ಲಿ ಮಲಗುವುದಿಲ್ಲ ಎಂದು ಸಂಕಲ್ಪ ಮಾಡಿದರು. ಅಲ್ಲದೆ ಇನ್ನು ಮುಂದೆ ತಮ್ಮ ನಿದ್ದೆಯನ್ನು ಕಡಿಮೆ ಮಾಡಬೇಕೆಂದು, ರಾತ್ರಿಯ ವೇಳೆಯೂ ಜಪ ಮಾಡಲು ಪ್ರಾರಂಭಮಾಡಿದರು. ಕ್ರಮೇಣ ನಿದ್ದೆಯನ್ನು ಗೆದ್ದುಬಿಟ್ಟರು. ಕ್ರಮೇಣ ಇಚ್ಛೆ ಬಂದ ವೇಳೆ ಮಲಗಿ, ಉಳಿದ ಸಮಯ ಧ್ಯಾನ-ಜಪಗಳಲ್ಲಿ ಕಳೆದರು. ಆಧ್ಯಾತ್ಮಿಕ ಮೇರು ವ್ಯಕ್ತಿಯಾದರು.

ಭಗವಾನ್ ಶ್ರೀರಾಮಕೃಷ್ಣರು ನರೇಂದ್ರನಿಗೆ ಅಷ್ಟಸಿದ್ಧಿಗಳನ್ನು ಕೊಡುವುದಾಗಿ ತಿಳಿಸಿದ್ದರು. ನಾವುಗಳಾಗಿದ್ದರೋ ಪ್ರಾಯಶಃ ಸಂತೋಷದಿಂದ ಸ್ವೀಕರಿಸುತ್ತಿದ್ದೆವು. ಆದರೆ ನರೇಂದ್ರನು, ''ಮಹಾಶಯರೇ, ಇದು ನನಗೆ ಭಗವಂತನನ್ನು ಪಡೆಯಲು ನೆರವಾಗುತ್ತದೆಯೆ?'' ಎಂದು ಕೇಳಿದ. ಶ್ರೀರಾಮಕೃಷ್ಣರು ''ಇಲ್ಲ, ಬದಲಾಗಿ ಆಧ್ಯಾತ್ಮಿಕ ಜೀವನಕ್ಕೆ ಮಾರಕವಾಗಬಹುದು'' ಎಂದರು. ತಕ್ಷಣವೇ ನರೇಂದ್ರನು, ''ಹಾಗಾದರೆ, ಇದು ನನಗೆ ಬೇಡ'' ಎಂದು ನಿರಾಕರಿಸಿದ, ತ್ಯಜಿಸಿದ.

### ೩) ರಕ್ಷಿಷ್ಯತೀತಿ ವಿಶ್ವಾಸಃ

ಭಗವಂತನು ನಮ್ಮನ್ನು ರಕ್ಷಿಸುತ್ತಾನೆ ಎಂಬ ಅಚಲವಾದ ನಂಬಿಕೆ.

**ರಕ್ಷಿಷ್ಯತಿ ಹಿ ಮಾಂ ಕೃಷ್ಣೋ ಭಕ್ತಾನಾಂ ಬಾಂಧವಶ್ಚ ಸಃ ।**
**ಕ್ಷೇಮಂ ವಿಧಾಸ್ಯತೀತಿ ಯದ್ವಿಶ್ವಾಸೋಽತ್ರೈವ ಗೃಹ್ಯತೇ ॥**

*(ಶ್ರೀ ಪ್ರಪನ್ನ ಜೀವನಾಮೃತ, ೫.೧)*

'ಕೃಷ್ಣನು ನನ್ನನ್ನು ನಿಶ್ಚಯವಾಗಿಯೂ ರಕ್ಷಿಸುತ್ತಾನೆ. ಏಕೆಂದರೆ ಅವನು ಭಕ್ತರ ಬಾಂಧವ. ಅವನು ನನ್ನ ಕ್ಷೇಮವನ್ನು ನೋಡಿಕೊಳ್ಳುತ್ತಾನೆ ಎಂಬುದು ದೃಢವಾದ ವಿಶ್ವಾಸ.' (ಇಲ್ಲಿ ಕೃಷ್ಣ ಎಂದರೆ ಭಗವಂತ ಎಂದು ತೆಗೆದುಕೊಳ್ಳಬೇಕು.)

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶದಲ್ಲಿ ವೇದಾಂತ ಪ್ರಚಾರ ಮಾಡುವ ಸಮಯದಲ್ಲಿ ಪ್ರಸಿದ್ಧರಾದರು. ಇದನ್ನು ಸಹಿಸದ ಕೆಲವರು, ಸ್ವಾಮೀಜಿಯನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಕಾಫಿಯಲ್ಲಿ ವಿಷ ಬೆರಸಿ ನೀಡಿದರು. ಇದನ್ನು ಅರಿಯದ ಸ್ವಾಮೀಜಿ ಕಾಫಿಯನ್ನು ಸ್ವೀಕರಿಸಲು ಹೋಗುವ ಸಮಯದಲ್ಲಿ ಶ್ರೀರಾಮಕೃಷ್ಣರು ದರ್ಶನವಿತ್ತು, ''ಕಾಫಿಯನ್ನು ಕುಡಿಯಬೇಡ, ಅದರಲ್ಲಿ ವಿಷವಿದೆ'' ಎಂದು ತಿಳಿಸಿದರು. ಹೀಗೆ ಸ್ವಾಮೀಜಿಯವರನ್ನು ರಕ್ಷಿಸಿದರು.

ಕಲ್ಕತ್ತೆಯಲ್ಲಿ ಬಡ ಮುಸ್ಲಿಮನೊಬ್ಬನ ಗುಡಿಸಲು ಬೆಂಕಿಗೆ ತುತ್ತಾಯಿತು. ಇದರಿಂದ ಅವನು ಬಹಳ ದುಃಖಿತನಾದ. ಬಡವ ಬೇರೆ, ಕೈಯಲ್ಲಿ ಬಿಡಿಗಾಸಿಲ್ಲ. ಕಷ್ಟಪಟ್ಟು ಒಂದು ವರ್ಷದಲ್ಲಿ ಸಣ್ಣಗುಡಿಸಲನ್ನು ಕಟ್ಟಿದ. ಮತ್ತೊಮ್ಮೆ ಬೆಂಕಿ ಅನಾಹುತ ಉಂಟಾಯಿತು. ಹೀಗೆ ಮೂರು ಬಾರಿ ಬೆಂಕಿ ಅನಾಹುತ ಸಂಭವಿಸಿತು. ದಾರಿಕಾಣದೆ, ಅಳುತ್ತಾ ಕುಳಿತ್ತಿದ್ದ ಆ ಬಡ ಮುಸ್ಲಿಂನಿಗೆ, ನೆರೆಮನೆಯವನೊಬ್ಬನು ಶ್ರೀರಾಮಕೃಷ್ಣರ ಬಗ್ಗೆ ತಿಳಿಸಿದನು. ಆಗ ಶ್ರೀರಾಮಕೃಷ್ಣರು ಜಟಕಾಬಂಡಿಯಲ್ಲಿ ಸಮೀಪದ ರಸ್ತೆಯಲ್ಲಿ ಹೋಗುತ್ತಿದ್ದರು. ನೆರೆಮನೆಯವನು, ''ಇವರ ನೆರವನ್ನು ಪ್ರಾರ್ಥಿಸು'' ಎಂದನು. ಅದಕ್ಕೆ ಆತ, ''ನಾನು ಇಸ್ಲಾಂ ಧರ್ಮಕ್ಕೆ ಸೇರಿದವನು. ಅವರಾದರೋ ಹಿಂದೂಧರ್ಮಕ್ಕೆ ಸೇರಿದವರು. ಸಹಾಯ ಮಾಡುವರೆ?'' ಎಂದು ಸಂಶಯದಿಂದ ಪ್ರಶ್ನಿಸಿದ. ನೆರೆಮನೆಯವನು, ''ಹೌದು'' ಎನ್ನಲು, ಆತನು ಓಡಿ ಹೋಗಿ, ಶ್ರೀರಾಮಕೃಷ್ಣರ ಪದತಲದಲ್ಲಿ ಶರಣುಹೋದ. ಶ್ರೀರಾಮಕೃಷ್ಣರು ಅವನ ಪ್ರಾರ್ಥನೆಗೆ ಮನಸೋತು, ಜಟಕಾಬಂಡಿಯಿಂದ ಇಳಿದು ಅವನ ಗುಡಿಸಿಲಿದ್ದ ಜಾಗಕ್ಕೆ ಬಂದರು. ಆ ಜಾಗವನ್ನು ಮೂರು ಸುತ್ತು ಸುತ್ತಿ ಏನೂ ಮಾತನಾಡದೇ ಹೊರಟು ಹೋದರು. ಆ ಮುಸ್ಲಿಂ ಭಕ್ತನು ಮೊದಮೊದಲು ಕಕ್ಕಾಬಿಕ್ಕಿಯಾದ. ನಂತರ ಅವನಿಗೆ ಶ್ರೀರಾಮಕೃಷ್ಣರ ಕೃಪಾಕಟಾಕ್ಷದ ಅರಿವಾಯಿತು. ಮುಂದೆಂದೂ ಅವನ ಗುಡಿಸಲು ಬೆಂಕಿಯ ಅನಾಹುತಕ್ಕೆ ತುತ್ತಾಗಲಿಲ್ಲ.

ಬಸವಣ್ಣನವರು ಹೇಳಿದರು,

**ನಂಬರು ನೆಚ್ಚರು ಬರಿದೇ ಕರೆವರು**
**ನಂಬಲರಿಯದ ಲೋಕದ ಮನುಜರು**
**ನಂಬಿ ಕರೆದೊಡೆ ಓ ಎನ್ನನೇ ಶಿವ ॥**

**ನಂಬದೆ ನೆಚ್ಚದೆ ಬರಿದೇ ಕರೆವರ**
**ಕೊಂಬೆ ಮೆಚ್ಚಕೊಡದೆಂದ ಕೂಡಲಸಂಗಮದೇವ ॥**

### ೪) ಗೋಪ್ತೃತ್ವೇ ವರಣಂ

ಭಗವಂತ ನಮ್ಮ ರಕ್ಷಕ ಎಂದು ಸ್ವೀಕರಿಸುವುದು.

**ಹೇ ಕೃಷ್ಣ ಪಾಹಿ ಮಾಂ ನಾಥ ಕೃಪಯಾತ್ಮಗತಂ ಕುರು**
**ಇತಿ ಏವಂ ಪ್ರಾರ್ಥನಾಂ ಕೃಷ್ಣಂ ಪ್ರಾಪ್ತುಂ ಸ್ವಾಮಿ ಸ್ವರೂಪತಃ ।**

**ಗೋಪ್ತೃತ್ವೇ ವರಣಂ ಜ್ಞೇಯಂ ಭಕ್ತೈಃ ಹೃದ್ಯತರಂ ಪರಮ್**
**ಪ್ರಪತ್ತಿ ಏಕಾರ್ಥಕತ್ವೇನ ತದಂಗಿತ್ವೇನ ತತ್ ಸ್ಮೃತಮ್ ॥**

*(ಶ್ರೀ ಪ್ರಪನ್ನ ಜೀವನಾಮೃತ, ೬.೧–೨)*

'ಹೇ ಕೃಷ್ಣ, ದಯವಿಟ್ಟು ನನ್ನನ್ನು ರಕ್ಷಿಸು, ಸಲಹು. ಹೇ ಪ್ರಭು, ದಯವಿಟ್ಟು ನನ್ನ ಮೇಲೆ ನಿನ್ನ ಕೃಪೆಯನ್ನು ಬೀರು.' ನಿಜವಾದ ಭಕ್ತರಿಗೆ ಈ ಪ್ರಾರ್ಥನೆಯು ಶ್ರೀಕೃಷ್ಣನನ್ನು ತಮ್ಮ ಸ್ವಾಮಿಯೆಂದು ಸ್ವೀಕರಿಸಲು ಅತ್ಯಂತ ತೃಪ್ತಿಯನ್ನು ನೀಡುವುದು.

ಭಕ್ತರು ಕೃಷ್ಣನನ್ನು ತಮ್ಮ ರಕ್ಷಕನೆಂದು ಭಾವಿಸುವುದು ತಮ್ಮ ಹೃದಯಕ್ಕೆ ಅತ್ಯಂತ ಹತ್ತಿರವಾಗಿರುತ್ತದೆ. ಇದು ಪ್ರಪತ್ತಿ ಮತ್ತು ಶರಣಾಗತಿಯ ಮೂಲ ಅಂಗ. ಇನ್ನುಳಿದ ಐದು ಅಂಶಗಳು ಇದರ ಅಂಗಗಳು.

ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ಪರಮಪೂಜ್ಯ ಸ್ವಾಮಿ ತ್ಯಾಗೀಶಾನಂದರು ಸೇವೆ ಸಲ್ಲಿಸಿದ್ದಾರೆ. ಅದಕ್ಕೆ ಮೊದಲು ಶ್ರೀರಾಮಕೃಷ್ಣ ಆಶ್ರಮ, ಮೈಸೂರಿನಲ್ಲಿ ಮಹಾರಾಜರ ಹಣದ ನೆರವಿನಿಂದ ಸ್ಟಡಿ ಸರ್ಕಲ್‌ನಲ್ಲಿ ಸಂನ್ಯಾಸಿಗಳಿಗೆ ವೇದಾಂತ ತರಬೇತಿ ಕಾರ್ಯಕ್ರಮದಲ್ಲಿ, ಪೂಜ್ಯರು ಒಂದು ವರ್ಷ ವೇದಾಂತ ಬೋಧನೆ ಮಾಡಿದ್ದರು. ಇದು ಸುಮಾರು ೧೯೪೦–೧೯೫೦ರ ಸಮಯ. ಭಗವಾನ್ ಶ್ರೀರಾಮಕೃಷ್ಣರ ಜಯಂತಿ ಆಚರಿಸಲು ಬರುವ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲು ಹಣವಿರಲಿಲ್ಲ. ಆದ್ದರಿಂದ ನರಸಿಂಹ ಮಹಾರಾಜ್ (ಮುಂದೆ ಸ್ವಾಮಿ ವಿಬುಧಾನಂದರು) ಸ್ವಾಮಿ ತ್ಯಾಗೀಶಾನಂದರ ಬಳಿ ಸಾರಿ, ಆಗಿನ ಹಣದ ಅವಸ್ಥೆಯನ್ನು ತಿಳಿಸಿ, ಹತ್ತಿರವಿರುವ ಮಾರುಕಟ್ಟೆಗೆ ಹೋಗಿ, ವ್ಯಾಪಾರಿಗಳಿಗೆ ತಮ್ಮ ಆಶ್ರಮದ ವಿಷಯವನ್ನು ತಿಳಿಸಿ, ಹಣದ ನೆರವನ್ನು ಪಡೆಯಬೇಕೆಂಬ ತಮ್ಮ ಬಯಕೆಯನ್ನು ಬಿನ್ನವಿಸಿಕೊಂಡರು.

ಆದರೆ ಸ್ವಾಮಿ ತ್ಯಾಗೀಶಾನಂದರು, ''ಶ್ರೀರಾಮಕೃಷ್ಣರ ಇಚ್ಛೆಯಿದ್ದಂತಾಗಲಿ, ಏನೂ ಬೇಡ'' ಎಂದುಬಿಟ್ಟರು. ನರಸಿಂಹ ಮಹಾರಾಜ್ ಸುಮ್ಮನಾಗಬೇಕಾಯಿತು. ಎರಡು ದಿವಸಗಳಲ್ಲಿ ಶ್ರೀರಾಮಕೃಷ್ಣರ ಜಯಂತಿ. ಆಶ್ರಮದಲ್ಲಿ ಏನೂ ಇಲ್ಲ. ಮುಂದೆ ಹೇಗೆ ಎಂದು ಸಾಧು–ಬ್ರಹ್ಮಚಾರಿಗಳು ಕಳವಳಗೊಂಡಿದ್ದರು. ಆದರೆ ಸ್ವಾಮಿ ತ್ಯಾಗೀಶಾನಂದರು ಪ್ರಭು ಶ್ರೀರಾಮಕೃಷ್ಣರ ಮೇಲೆ ಭಾರ ಹಾಕಿ, ಅವನ ಇಚ್ಛೆಯಿದ್ದಂತಾಗಲಿ ಎಂದು ಸಮಾಧಾನದಿಂದಿದ್ದರು. ಪವಾಡವೆಂಬಂತೆ, ಜಯಂತಿಯ ಹಿಂದಿನ ದಿವಸ ಒಂದು ಎತ್ತಿನ ಗಾಡಿಯಲ್ಲಿ ವ್ಯಾಪಾರಿಯೊಬ್ಬರು ಜಯಂತಿಗೆ ಬೇಕಾಗುವಷ್ಟು ಸಾಮಗ್ರಿಗಳನ್ನು ಕೇಳದೇ ಕಳುಹಿಸಿದ್ದರು. ಆಶ್ಚರ್ಯ, ವಿಚಾರಿಸಿದಾಗ ಆ ವ್ಯಾಪಾರಿಗೆ ಭಗವಂತನ ಆದೇಶವಾದ ಕಾರಣ, ಅದನ್ನು ಕಳುಹಿಸಿದ್ದನೆಂದು ನಂತರ ತಿಳಿಯಿತು. ಭಗವಂತ ನಮ್ಮೆಲ್ಲರನ್ನೂ ಸಲಹುತ್ತಾನೆ, ರಕ್ಷಿಸುತ್ತಾನೆ ಎಂಬ ದೃಢನಂಬಿಕೆಯಷ್ಟೇ ಇಲ್ಲಿ ಕೆಲಸ ಮಾಡಿತು. ಭಕ್ತ ಕನಕದಾಸರು ಹೇಳುತ್ತಾರೆ:

**ತಲ್ಲಣಿಸದಿರು ಕಂಡ್ಯ ತಾಳು ಮನವೇ**
**ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ....**

### ೫) ಆತ್ಮನಿಕ್ಷೇಪ – ಆತ್ಮನಿವೇದನೆ

**ಕೃಷ್ಣಯಾರ್ಪಿತ ದೇಹಸ್ಯ ನಿರ್ಮಮಸ್ಯಾನಹಂಕೃತೇಃ ।**
**ಮನಸಃ ತತ್ಸ್ವರೂಪತ್ವಂ ಸ್ಮೃತಮಾತ್ಮನಿವೇದನಂ ॥**

*(ಶ್ರೀ ಪ್ರಪನ್ನ ಜೀವನಾಮೃತ, ೭–೪)*

ಆತ್ಮನಿವೇದನೆ ಎಂದರೆ ಕೃಷ್ಣನಿಗೆ ದೇಹವನ್ನು ಸಂಪೂರ್ಣವಾಗಿ ಸಮರ್ಪಿಸಿ, ನಾನು-ನನ್ನದು, ಅಹಂ-ಮಮಕಾರಗಳಿಲ್ಲದಿರುವುದು. ಮನಸ್ಸಿನಲ್ಲಿ ಸದಾ ಅವನ ಸ್ವರೂಪವನ್ನು ಧ್ಯಾನಿಸುವುದು ಎಂದು ಅರ್ಥ.

ಭಕ್ತನೊಬ್ಬನು ಎಲ್ಲವೂ ಕೃಷ್ಣಾರ್ಪಣ ಎಂದು ನುಡಿಯುತ್ತಿದ್ದ. ಆದರೆ ಅವನು ಮಾಡಿದ ದಾನ-ಧರ್ಮಗಳಿಗೆ, ಸರಿಯಾದ ಮನ್ನಣೆ ನೀಡದಿದ್ದರೆ, ಅವನ ಹೆಸರನ್ನು ಸರಿಯಾದ ಜಾಗದಲ್ಲಿ, ಚೆನ್ನಾಗಿ ಕಾಣುವಂತೆ ಹಾಕಿಸದಿದ್ದರೆ ಕೋಪಗೊಳ್ಳುತ್ತಿದ್ದ. ಇದು ಆತ್ಮನಿವೇದನೆ ಆಗುವುದಿಲ್ಲ.

ಸ್ವಾಮಿ ತ್ರಿಗುಣಾತೀತಾನಂದರು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಭಗವಾನ್ ಶ್ರೀರಾಮಕೃಷ್ಣರ ದೇವಾಲಯವನ್ನು ನಿರ್ಮಿಸಿದರು. ಅಮೆರಿಕದಲ್ಲಿ ಇದು ಪ್ರಥಮ ಹಿಂದೂ ದೇವಾಲಯವಾಗಿತ್ತು.

ಅಮೆರಿಕಾದಲ್ಲಿ ಒಮ್ಮೆ ಪ್ರಬಲವಾದ ಭೂಕಂಪ ಉಂಟಾಯಿತು. ನಗರದ ಬಹುತೇಕ ಮನೆಗಳು, ಕಟ್ಟಡಗಳು ನೆಲಕಚ್ಚಿದವು. ಅದೇ ಸಮಯದಲ್ಲಿ ಸ್ವಾಮಿ ತ್ರಿಗುಣಾತೀತಾನಂದರು ‘‘ಹೇ ಪ್ರಭು ರಾಮಕೃಷ್ಣ – ಈ ದೇವಾಲಯವನ್ನು ನಿನ್ನ ಹೆಸರಿನಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ ಯಾವ ಸ್ವಾರ್ಥ, ಅಹಂ ಲೇಶವೂ ಇಲ್ಲ. ಇದು ಸತ್ಯವಾಗಿದ್ದರೆ, ಮಂದಿರಕ್ಕೆ ಏನೂ ಆಗದಿರಲಿ’’ ಎಂದರು. ಆಶ್ಚರ್ಯವೆಂಬಂತೆ, ಸುತ್ತಮುತ್ತಲಿನ ಕಟ್ಟಡಗಳು ಭೂಕಂಪದಿಂದ ನಾಶವಾದರೂ ಆ ಮಂದಿರಕ್ಕೆ ಏನೂ ಆಗಲಿಲ್ಲ. ಈಗಲೂ ಅದು ಸುಂದರವಾಗಿದೆ. ಇದು ಆತ್ಮನಿವೇದನೆಗೆ ಒಂದು ನಿದರ್ಶನ.

ಎಲ್ಲವನ್ನೂ ಭಗವಂತನಿಗಾಗಿ ಮಾಡುವುದು, ಭಗವಂತನಲ್ಲಿ ತನು-ಮನಗಳನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದನ್ನು ಆತ್ಮನಿವೇದನೆ ಎಂದು ಕರೆಯಲಾಗುವುದು. ಮೀರಾಬಾಯಿಯ ಜೀವನ ಇದಕ್ಕೆ ಮತ್ತೊಂದು ಉತ್ತಮ ನಿದರ್ಶನ.

### ೬) ಕಾರ್ಪಣ್ಯ

ತನ್ನ ಇತಿ-ಮಿತಿಗಳನ್ನು, ಅಸಹಾಯಕತೆಯನ್ನು ತಿಳಿಯುವುದು.

**ಭಗವಾನ್ ರಕ್ಷ ರಕ್ಷೈವಂ ಆರ್ತಭಾವೇನ ಸರ್ವತಃ ।**
**ಅಸಮೋರ್ಧ್ವದಯಾಸಿಂಧೋರ್ಹರೇಃ ಕಾರುಣ್ಯ ವೈಭವಂ ॥**

**ಸ್ಮರತಾಂಶ್ಚ ವಿಶೇಷೇಣ ನಿಜಾತಿ-ಶೋಚ್ಯ ನೀಚತಾಮ್ ।**
**ಭಕ್ತನಾಮಾರ್ತಿಭಾವಸ್ತು ಕಾರ್ಪಣ್ಯಂ ಕಥ್ಯತೇ ಬುಧೈಃ ॥**

*(ಶ್ರೀ ಪ್ರಪನ್ನ ಜೀವನಾಮೃತ, ೮.೧-೨)*

‘ಭಗವಂತನೇ, ನನ್ನನ್ನು ರಕ್ಷಿಸು, ನನ್ನನ್ನು ರಕ್ಷಿಸು ಎಂಬ ಆರ್ತ ಭಾವನೆಯನ್ನು ಸದಾ ಹೊಂದಿದ್ದು, ಭಗವಂತನ ಅಸೀಮ ಕರುಣೆ, ಸಾಗರದಂತಹ ದಯೆಯ ಮಹತ್ವವನ್ನು ನೆನೆಯುತ್ತಾ, ತನ್ನ ಇತಿ-ಮಿತಿಗಳನ್ನು ತಿಳಿದು, ಮನಸ್ಸಿನಲ್ಲಿ ನೆನೆಯುತ್ತಾ, ಭಗವಂತನ ನೆರವಿಗೆ ಹೃದಯಾಂತರಾಳದಿಂದ ಪ್ರಾರ್ಥಿಸುವುದನ್ನು ಕಾರ್ಪಣ್ಯ ಎಂದು ಕರೆಯುತ್ತಾರೆ.’

ಅರ್ಜುನನು ತನ್ನ ಅಸಹಾಯಕತೆಯನ್ನು, ಕಾರ್ಪಣ್ಯತ್ವವನ್ನು ತಿಳಿದು, ಭಗವಾನ್ ಶ್ರೀಕೃಷ್ಣನಲ್ಲಿ ಶರಣು ಹೋದಾಗ, ಅವನಿಗೆ ಗೀತೋಪದೇಶವಾಯಿತು. ಭಗವಂತನ ಕರುಣೆಯಿಂದ ಅವನ ಮೋಹ, ಭ್ರಾಂತಿಗಳು ನೀಗಿ, ಕರ್ತವ್ಯ ಪ್ರಜ್ಞೆಯು ಜಾಗೃತವಾಯಿತು. ಅರ್ಜುನನು ಭಗವಂತನ ಆಜ್ಞಾಧಾರಕನಾಗಿ ತನ್ನ ಕೆಲಸ, ಕರ್ತವ್ಯಗಳನ್ನು ನಿರ್ವಹಿಸಿದ.

ನಾವು ಅನೇಕ ಕಾರ್ಯಗಳನ್ನು ಮಾಡಬಹುದು. ಸಾಧನೆಗಳನ್ನು ಭೌತಿಕ ಜಗತ್ತಿನಲ್ಲಿ ಸಾಧಿಸಬಹುದು. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಅವನ ಕೃಪೆಯಾಗದ ಹೊರತು ಮುಕ್ತಿ ಸಾಧ್ಯವಿಲ್ಲ. ಸಂಸಾರ ಸಾಗರವನ್ನು ದಾಟಲು ಆಗುವುದಿಲ್ಲ. ಅದನ್ನೇ ಸರಿಯಾಗಿ ತಿಳಿದು, ಪರಮಾತ್ಮನಲ್ಲಿ ಶರಣಾಗತನಾಗುವುದು ಕಾರ್ಪಣ್ಯ.

ನಮಗೆ ಸಾಧ್ಯವಾಗುವಷ್ಟು ಪ್ರಯತ್ನ ಮಾಡಿ, ಸಾಧ್ಯವಾಗದಿದ್ದಾಗ ಅಥವಾ ನಮ್ಮ ಇತಿ-ಮಿತಿಗಳನ್ನು ತಿಳಿದಾಗ ಮಾತ್ರ ನಿಜವಾದ ಶರಣಾಗತಿ ಉಂಟಾಗಲು ಸಾಧ್ಯ.

ಶ್ರೀರಾಮಕೃಷ್ಣರು ಹೇಳುವಂತೆ, ಪಕ್ಷಿಯೊಂದು ಹಡಗಿನ ಮೇಲೆ ಕುಳಿತು ನಿದ್ರಿಸಿತು. ಅದೇ ಸಮಯದಲ್ಲಿ ಹಡಗು ದಡದಿಂದ ಬಹಳ ದೂರ ಹೋಗಿತ್ತು. ಪಕ್ಷಿ ನಿದ್ದೆಯಿಂದ ಎದ್ದಾಗ, ಸಮುದ್ರದ ಮಧ್ಯದಲ್ಲಿರುವಂತೆ ಭಾಸವಾಯಿತು. ಅದು ಸಾಧ್ಯವಾಗುವಷ್ಟು ದೂರ ಪೂರ್ವದಿಕ್ಕಿನತ್ತ ಹಾರಿತು, ದಡ ಕಾಣದೆ ವಾಪಸ್ಸಾಯಿತು. ನಂತರ ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳಲ್ಲಿ ಹಾರಿ, ಭೂಮಿ ಕಾಣದೆ ಬಂದು ಹಡಗಿನ ಮೇಲೆ ಕುಳಿತುಕೊಂಡಿತು. ಹಡಗು ಹೋದ ಜಾಗಕ್ಕೆ, ಅದು ಹೋಗಲು ನಿಶ್ಚಯಿಸಿತು. ಕೆಲವು ದಿನಗಳಾದ ಮೇಲೆ, ಹಡಗು ನಗರವೊಂದನ್ನು ತಲುಪಲು, ಪಕ್ಷಿಯು ಸಂತೋಷದಿಂದ ಹಾರಿಹೋಯಿತು.

ಹೀಗೆ, ನಮಗೆ ಸಾಧ್ಯವಾಗುವಷ್ಟು ಸಮಯ ನಾವು ಶಕ್ತಿ ಮೀರಿ ಪ್ರಯತ್ನ ಮಾಡಿದಾಗ, ಒಂದಿಷ್ಟು ಆಧ್ಯಾತ್ಮಿಕ ಪ್ರಗತಿ ಉಂಟಾಗುತ್ತದೆ. ಆದರೆ ಕೇವಲ ಪುರುಷ ಪ್ರಯತ್ನದಿಂದಲೇ ಎಲ್ಲವೂ ಸಾಧ್ಯವಿಲ್ಲ ಎಂದು ನಮ್ಮ ಇತಿ-ಮಿತಿಯನ್ನು ನಾವು ಅರಿಯುತ್ತೇವೆ. ಆಗ ನಮ್ಮಲ್ಲಿ ನಿಜವಾದ ಶರಣಾಗತಿ ಉಂಟಾಗುತ್ತದೆ. ಅಲ್ಲಿಯವರೆಗೆ, ಅದು ಕೇವಲ ಬಾಯಿಮಾತು.

ಶರಣಾಗತಿ ಎಂದರೆ ಸೋಮಾರಿತನವಲ್ಲ. ಅದು ಸಾಧ್ಯವಾದ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿ, ತನ್ನ ಮಿತಿಯನ್ನು ತಿಳಿದು, ಪ್ರಜ್ಞಾಪೂರ್ವಕವಾಗಿ ಭಗವಂತನ ನೆರವನ್ನು ಬೇಡುವ ಸ್ಥಿತಿ, ಪ್ರಕ್ರಿಯೆ ಎಂದು ನಾವು ತಿಳಿಯಬೇಕು.

ವಿಶ್ವವಿಜೇತ, ವಿಶ್ವಮಾನವ ಸ್ವಾಮಿ ವಿವೇಕಾನಂದರು ಇಡೀ ವಿಶ್ವವನ್ನೇ ಬೆರಗುಗೊಳಿಸಿದರು. ಆದರೆ ಅವರು **‘ತಸ್ಮಾತ್ ತ್ವಮೇವ ಶರಣಂ ಮಮ ದೀನಬಂಧೋ’** ಎಂದು ‘ಓಂ ಹ್ರೀಂ ಋತಂ ಸ್ತೋತ್ರ’ದಲ್ಲಿ ಹೇಳಿರುವುದು ಗಮನಾರ್ಹವಾದ ವಿಷಯ. ಪ್ರಪತ್ತಿ ಅಥವಾ ಶರಣಾಗತಿಗೆ ಆ ಸ್ತೋತ್ರವು ಒಂದು ಉತ್ತಮ ನಿದರ್ಶನ, ಮಾರ್ಗದರ್ಶಿ.